**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1607/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಜಾಫರ್ ಶರೀಫ್ | ಫ್ರಾಸಾ-10 |
| ತಂದೆಯ ಹೆಸರು | : ಕೆ. ಆಲೀ ಶರೀಫ್ | ಚಾಸಾ-15 |
| ವಯಸ್ಸು | : 45 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಹೆಚ್.ಸಿ.12 | ದಿನಾಂಕಃ 16.07.2026. |
| ವಾಸಸ್ಥಳ | : ಗೋಣೀಬೀಡು ಪೋಲೀಸ್ ಠಾಣೆ. | |

**:ಮುಖ್ಯ ವಿಚಾರಣೆಃ ಪ್ರಾಭ್ಯಾ.ಸ.ಸ.ಅ. ರವರಿಂದ:**

1. ನಾನು ದಿ.27.08.2020 ರಿಂದ ದಿ.27.09.2023 ರವರೆಗೂ ಬಾಳೂರು ಪೋಲೀಸ್ ಠಾಣೆಯಲ್ಲಿ ಹೆಚ್.ಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ.14.01.2023 ರಂದು ನಾನು ಠಾಣಾ SHO ಕರ್ತವ್ಯದಲ್ಲಿ ಇದ್ದಾಗ ಮ.3.00 ಗಂಟೆ ಸಮಯಕ್ಕೆ ಚಾಸಾ-1 ಜ್ಯೋತಿ ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿಕೊಂಡು ಠಾ.ಮೊ.ಸಂ.05/2023 ರಂತೆ ಪ್ರ.ವ.ವರದಿ ದಾಖಲಿಸಿ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ.

3. ನಂತರ ದಿ.15.01.2023 ರಂದು ಕೃತ್ಯ ನಡೆದ ಸ್ಥಳವಾದ ಬಾಳೂರು ಹೊರಟ್ಟಿ ಗ್ರಾಮದಲ್ಲಿ ಚಾಸಾ-5 ಮತ್ತು 6, ಸಾಗರ್ ಮತ್ತು ಸುರೇಶ್ ರವರನ್ನು ನಿಯಮಾನುಸಾರ ಪಂಚರನ್ನಾಗಿ ಬರಮಾಡಿಕೊಂಡು ಅವರ ಸಮಕ್ಷಮ ಚಾಸಾ-1 ರವರು ವಾಸದ ಮನೆಯ ಹತ್ತಿರ ಹೋಗಿ ಅವರು ತೋರಿಸಿದಂತೆ ಮನೆಯ ಮುಂದಿನ ಭಾಗದಲ್ಲಿ ಬಿದ್ದಿದ್ದ ನೀಲಿ ಬಣ್ಣದ ಗಾಜಿನ ಚೂರು, ಹಸಿರು ಬಣ್ಣದ ಬಳೆಯ ಚೂರುಗಳು, ಮನೆಯ ಒಳಗೆ ಇದ್ದ ಒಂದು ಸಿಲ್ವರ್ ಜಾತಿಯ 34 ½ ಇಂಚು ಸುತ್ತಳತೆಯ ಮತ್ತು 6 ½ ಇಂಚು ಉದ್ದದ ದೊಣ್ಣೆಯನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡಿರುತ್ತೇನೆ.

4. ನಂತರ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ಸದರಿ ಮಹಜರ್ ನ್ನು ಮ.11.00 ರಿಂದ 12.30 ಗಂಟೆಯವರೆಗೂ ಸ್ಥಳ ಮಹಜರ್ ಕ್ರಮ ಚಾಸಾ-13 ರವರಿಂದ ಬರೆಸಿ, ಫೋಟೋ ತೆಗೆಸಿರುತ್ತೇನೆ.

5. ವಶಕ್ಕೆ ಪಡೆದ ವಸ್ತುಗಳನ್ನು ಮಾ.ಸಂ.4/2023 ಕ್ಕೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

6. ದಿ.15.01.2023 ರಂದು ಚಾಸಾ-2 ಪ್ರಸನ್ನ ಮತ್ತು ಚಾಸಾ-3 ಪ್ರಕಾಶ, ಚಾಸಾ-4 ಮನು ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

7. ದಿ.24.01.2023 ರಂದು ಪ್ರಕರಣದ ಕಡತವನ್ನು ಮುಂದಿನ ತನಿಖೆ ಸಂಬಂಧ ಚಾಸಾ-16 ಪವನ್ ಕುಮಾರ್ ರವರಿಗೆ ನೀಡಿರುತ್ತೇನೆ.

8. ಚಾಸಾ-16 ರವರು ಆದೇಶದ ಮೇರೆಗೆ ಆರೋಪಿಯನ್ನು ನಾನು ಮತ್ತು ಚಾಸಾ-12 ಅಭಿಷೇಕ್ ರವರು ದಸ್ತಗಿರಿ ಮಾಡಿ ಅವರ ಮುಂದೆ ಹಾಜರುಪಡಿಸಿರುತ್ತೇವೆ.

9. ಸಾಕ್ಷಿಯು ನಿಪಿ-1 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

10. ಸಾಕ್ಷಿಯು ನಿಪಿ-2 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

11. ಸಾಕ್ಷಿಯು ನಿಪಿ-3 ಮಹಜರ್ ನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಡಿ) ಎಂದು ಗುರುತಿಸಲಾಯಿತು. ನಿಪಿ-4 ರಿಂದ 11 ರ ಫೋಟೋಗಳಲ್ಲಿ ತಾವು ಇರುವ ಬಗ್ಗೆ ಗುರುತಿಸಿರುತ್ತಾರೆ.

12. ಸಾಕ್ಷಿಯು ದಿ.24.01.2023 ರ ವರದಿಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-36, ಸಾಕ್ಷಿಯ ಸಹಿಯನ್ನು ನಿಪಿ-36(ಎ) ಎಂದು ಗುರುತಿಸಲಾಯಿತು.

13. ನ್ಯಾಯಾಲಯದ ಮುಂದೆ ಇರುವ ಎಂ.ಒ.1 ರಿಂದ 3 ನ್ನು ನೋಡಿ ಗುರುತಿಸಿರುತ್ತಾರೆ. ಎಂ.ಒ.2 ಮತ್ತು 3 ರ ಮೇಲೆ ಇರುವ ಸಾಕ್ಷಿಯ ಸಹಿಗಳನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ಎಂ.ಒ.2(ಸಿ) ಮತ್ತು 3(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

1. ಚಾಸಾ-1 ರವರು ಟೈಪ್ ಮಾಡಿದ್ದ ದೂರನ್ನು ತಂದು ಹಾಜರುಮಾಡಿರುತ್ತಾರೆ. ಚಾಸಾ-1 ರವರು ಒಬ್ಬರೇ ಬಂದಿರುತ್ತಾರೆ.

2. ದೂರಿನಲ್ಲಿ ಅವರ ಮಾನಕ್ಕೆ ದಕ್ಕೆಯಾಗಿದೆ ಎಂದು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ದೂರುದಾರರ 164 ಹೇಳಿಕೆಯಲ್ಲೂ ಸಹಾ ಅವರ ಮಾನಕ್ಕೆ ದಕ್ಕೆಯಾಗಿದೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ.

3. ದೂರುದಾರರ ಮನೆಯ ಅಕ್ಕಪಕ್ಕ ಸುಮಾರು ಮನೆಗಳು ಇವೆ ಎಂದರೆ ಸರಿ. ಸದರಿರವರನ್ನು ಪಂಚರನ್ನಾಗಿ ಮಾಡಿಲ್ಲ.

4. ನಿಮ್ಮ ಜೊತೆ ಬಂದ ಪಂಚರು ದರಬಾರಪೇಟೆಯವರು ಎಂದರೆ ಸರಿಯಲ್ಲ.

5. ದೂರುದಾರರ ಮನೆಯ ಕಿಟಕಿ ಚೌಕಟ್ಟು ಕಬ್ಬಿಣದ್ದು ಎಂದರೆ ಸರಿ.

6. ದೂರುದಾರರ ಮನೆಯ ಹಿಂದೆ ಸೌದೆ ಕೊಟ್ಟಿಗೆ ಇದೆ ಎಂದರೆ? ನಾನು ನೋಡಿಲ್ಲ ಎಂದು ನುಡಿಯುತ್ತಾರೆ.

7. ಎಂ.ಒ.1 ರಂತಹ ದೊಣ್ಣೆಗಳು ಸದರಿ ಕೊಟ್ಟಿಗೆಯಲ್ಲಿ ಇದ್ದವು ಎಂದರೆ ಸರಿಯಲ್ಲ. ಸದರಿ ದೊಣ್ಣೆಯ ಮೇಲೆ ನಿಮ್ಮ ಸಹಿಯಾಗಲೀ ಪಂಚರ ಸಹಿಯಾಗಲೀ ಇಲ್ಲ ಎಂದರೆ ಸರಿ.

8. ಪ್ರ.ವ.ವರದಿಯಲ್ಲಿ ಗಾಯದ ವಿಧದಲ್ಲಿ ಮೈನರ್ ಗಾಯ ಎಂದು ನಮೂದು ಮಾಡಿದ್ದೇವೆ ಎಂದರೆ

ಸರಿ.

9. Green braslet ಎಂದು ನಿಮ್ಮ ಮಾಲು ಪಟ್ಟಿಯಲ್ಲಿ ನಮೂದು ಮಾಡಿದ್ದೀರ ಎಂದರೆ ಸರಿ.

10. ನೀವು ಸಾಕ್ಷಿದಾರರ ಸಮಕ್ಷಮ ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ.

11. ನೀವು ಹಾಜರುಮಾಡಿರುವ ದಾಖಲೆಗಳನ್ನು ಹಾಗೂ ಎಂ.ಒ.1 ರಿಂದ 3 ನ್ನು ಪ್ರಕರಣಕ್ಕೋಸ್ಕರ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ನೀವು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.